ಕರ್ನಾಟಕ ಸರ್ಕಾರ

ಸಂ: ಡಿಟಿಇ/38/ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 13-07-2018.

**-:: ಸು ತ್ತೋ ಲೆ ::-**

**ವಿಷಯ:** 2018-19ನೇ ಸಾಲಿನ 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳಿಗೆ ಸಂಜೆ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆಯಲು ಅಂತಿಮ ದಿನಾಂಕ ನಿಗಧಿಪಡಿಸುವ ಕುರಿತು.

**ಉಲ್ಲೇಖ:** 1) ಈ ಕಛೇರಿಯ ಸುತ್ತೋಲೆ ಸಂ: ಡಿಟಿಇ 20 ಎಸಿಎಂ(2) 2018-19, ದಿನಾಂಕ: 21-06-2018.

2) ಸರ್ಕಾರದ ಆದೇಶ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18-10-2005 ಮತ್ತು ಸರ್ಕಾರದ ಆದೇಶ ಸಂಖ್ಯೆ. ಇಡಿ 10 ಟಿಪಿಇ 2012, ದಿನಾಂಕ:29-05-2012 ಹಾಗೂ ಸರ್ಕಾರದ ಆದೇಶ ಸಂ. ಇಡಿ 64 ಟಿಪಿಇ 2016, ದಿ:21-06-2016.

-0000000-

2018-19ನೇ ಸಾಲಿನ ಡಿಪ್ಲೋಮಾ ವ್ಯಾಸಂಗದ 01, 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳ ಶೈಕ್ಷಣಿಕ ಕಾರ್ಯಕ್ರಮವನ್ನು ಉಲ್ಲೇಖ(1)ರಲ್ಲಿ ನಮೂದಿಸಿರುವ ಈ ಕಛೇರಿಯ ಸುತ್ತೋಲೆಯಲ್ಲಿ ನಿಗಧಿಪಡಿಸಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿನ ಸೂಚನೆಗಳ ಪ್ರಕಾರ ಪಠ್ಯಕ್ರಮದನ್ವಯ ಪಾಠಪ್ರವಚನಗಳು ಮತ್ತು ಪ್ರಾಯೋಗಿಕ ತರಗತಿಗಳನ್ನು ನಿಗಧಿತ ಅವಧಿಯ ಒಳಗೆ ಮುಗಿಸುವಲ್ಲಿ ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಉಲ್ಲೇಖ(2)ರ ಸರ್ಕಾರದ ಆದೇಶಗಳ ಪ್ರಕಾರ ಪಾಲಿಟೆಕ್ನಿಕ್ ಶಿಕ್ಷಣ ಶುಲ್ಕಗಳನ್ನು ಪಾವತಿಸುವ ಬಗ್ಗೆ ಈಗಾಗಲೇ ಮಾಹಿತಿಯನ್ನು ನೀಡಲಾಗಿದೆ. ಮುಂದುವರಿದಂತೆ, 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳಿಗೆ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಕೆಳಕಂಡಂತೆ ಅಂತಿಮ ದಿನಾಂಕ ನಿಗಧಿಪಡಿಸಲಾಗಿದೆ.

1. ದಿನಾಂಕ:**21-07-2018**ರವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಅರ್ಹ ಶುಲ್ಕವನ್ನು ಮಾತ್ರ ಪಡೆದು ಪ್ರವೇಶ ನೀಡುವುದು.
2. ದಿನಾಂಕ:**25-07-2018**ರವರೆಗೆ ₹ 200/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.
3. ದಿನಾಂಕ:**28-07-2018**ರವರೆಗೆ ₹ 400/-ರ ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.
4. ಅಂತಿಮವಾಗಿ ದಿ:**31-07-2018**ರವರೆಗೆ ₹ 1000/- ದಂಡ ಶುಲ್ಕದೊಂದಿಗೆ ಅರ್ಹ ಶುಲ್ಕವನ್ನು ಪಾವತಿಸಿಕೊಂಡು ಪ್ರವೇಶ ನೀಡುವುದು.

**ಮರುಪ್ರವೇಶ :-** 01, 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳಿಗೆ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ನಿಯಮಗಳನ್ವಯ ಮರುಪ್ರವೇಶ ನೀಡುವಲ್ಲಿ ಅಂತಿಮ **ದಿ:21-07-2018.**

01, 02, 04 ಮತ್ತು 06ನೇ ಸೆಮಿಸ್ಟರ್ ತರಗತಿಗಳಿಗೆ ನಿಯಮಗಳ ಪ್ರಕಾರ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಈ ಕೆಳಂಡ ಅಂಶಗಳನ್ನು ಪರಿಗಣಿಸಿ ಪ್ರವೇಶ ನೀಡತಕ್ಕದ್ದು.

- ಹಿಂದಿನ ಸೆಮಿಸ್ಟರ್‌ನಲ್ಲಿ ಹಾಜರಾತಿ ಕಡಿಮೆ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರಿರುವುದಿಲ್ಲ.
- ಪರೀಕ್ಷಾ ದುರಾಚಾರ (Suspected Malpractice) ಎಸಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಅನುಮತಿ ಪಡೆಯದೇ ಪ್ರವೇಶ ನೀಡತಕ್ಕದ್ದಲ್ಲ.
- ಪ್ರವೇಶಾನುಮೋದನೆಯಾಗದೇ ತಡೆಹಿಡಿದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಹರಿರುವುದಿಲ್ಲ.

ಮೇಲ್ಕಂಡ ಅಂಶಗಳನ್ನು ಪ್ರಿನ್ಸಿಪಾಲರು ಕಟ್ಟುನಿಟ್ಟಾಗಿ ಪಾಲಿಸಿತಕ್ಕದ್ದು. ಮೇಲೆ ನಿಗಧಿಪಡಿಸಿರುವ ದಿನಾಂಕದ ನಂತರ ಪ್ರವೇಶ ನೀಡಿದಲ್ಲಿ ನಿಗಧಿತ ಕನಿಷ್ಠ ಹಾಜರಾತಿ ದೊರೆಯುವುದಿಲ್ಲ. ಪ್ರಯುಕ್ತ, ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ಹಾಗೂ ಪ್ರವೇಶ ಕೋರಿ ತಡವಾಗಿ ಸಲ್ಲಿಸುವ ಮನವಿಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ತಿಳುವಳಿಕೆ ನೀಡುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದು. ಈ ನಿಟ್ಟಿನಲ್ಲಿ ಯಾವುದೇ ಮನವಿಗಳನ್ನು ನಿರ್ದೇಶನಾಲಯಕ್ಕೆ ಕಳುಹಿಸದೆ ನಿಯಮಗಳ ಪ್ರಕಾರ ಪ್ರಿನ್ಸಿಪಾಲರ ಹಂತದಲ್ಲೇ ಇತ್ಯರ್ಥಗೊಳಿಸಬೇಕೆಂದು ತಿಳಿಸಲಾಗಿದೆ. ತರಗತಿಗಳನ್ನು ನಿಗಧಿತ ಅವಧಿಯಲ್ಲಿ ಪ್ರಾರಂಭಿಸಿ, ಪಠ್ಯಕ್ರಮಕ್ಕೆ ವಿಶೇಷ ತರಗತಿಗಳನ್ನು ತೆಗೆದುಕೊಂಡು ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಮುಕ್ತಾಯಗೊಳಿಸುವುದು.

ನಿರ್ದೇಶಕರು

*ಇವರಿಗೆ,*

1. ಪ್ರಿನ್ಸಿಪಾಲರು, ಸರ್ಕಾರಿ ಎಸ್.ಜೆ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.
2. ಪ್ರಿನ್ಸಿಪಾಲರು, ಸರ್ಕಾರಿ ಕರ್ನಾಟಕ (ಸಂಜೆ) ಪಾಲಿಟೆಕ್ನಿಕ್, ಮಂಗಳೂರು.
3. ಪ್ರಿನ್ಸಿಪಾಲರು, ಎಂ.ಇ.ಐ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು.

} ಸೂಕ್ತ ಅನುಸರಣೆ ಹಾಗೂ ಮಾಹಿತಿಗಾಗಿ.

**ಪ್ರತಿ ಮಾಹಿತಿಗಾಗಿ:**

1. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
2. ಜಂಟಿ ನಿರ್ದೇಶಕರು (ಪರೀಕ್ಷೆ), ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ. ಬೆಂಗಳೂರು
3. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
4. ನಿರ್ದೇಶಕರ ಆಪ್ತಶಾಖೆಗೆ
5. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
6. ರಿಜಿಸ್ಟ್ರಾರ್(ಪರೀಕ್ಷೆ) ಮತ್ತು ಆರ್‌ಡಿಎಂ(1) ರಿಂದ (15) ರವರೆಗೆ
7. ಸಂಯೋಜನಾಧಿಕಾರಿಗಳು, ತಾಂತ್ರಿಕ ಶಿಕ್ಷಣ ನಿರ್ದೇಶನಲಾಯ – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
8. ಕಛೇರಿ ಪ್ರತಿ.